ತಾರೀಖು 14ನೆ ಫೆಬ್ರವರಿ 1907.

ನಂ. 7018—ಸ್ಯಾನಿಟೆರಿ (21-06)-86, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮಹ್ತು ಉತ್ಸವಕ್ಕೆ ಯಾತ್ರೆ ಹೋಗುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ಚೂಡನಾಥಸ್ವಾಮಿ ರಥೋತ್ಸವ.	ಚೂಡವಾಡಿ.	ಹೊಸೂರು.	ಸೇಲಂ	26—2—07 (ಉಭಯ ದಿನಗಳೂ ಸೇರಿ)	5—3—07	ಫರ್ಸ್ಟ್ ಅಸಿಸ್ಟೆಂಟ್ ರೆಸಿಡೆಂಟ್ ರವರ 1907ನೆ ಇಸವಿ ಫೆಬ್ರವರಿ 6ನೆ ಮತ್ತು 93ನೆ ನಂಬರ್ ಮೆಮೋ ಪ್ರಕಾರ.

ತಾರೀಖು 18ನೆ ಫೆಬ್ರವರಿ 1907.

ನಂ. 7188—ಸ್ಯಾನಿಟೆರಿ 170-06-2, ಮೈಸೂರು ಡಿಸ್ಟ್ರಿಕ್ಟ್ ನಾಗಮಂಗಲ ತಾಲ್ಲೂಕಿನ ಚುಂಚನಗಿರಿ ಗ್ರಾಮಕ್ಕೆ ಶ್ರೀಗಂಗಾಧರೇಶ್ವರ ಸ್ವಾಮಿಯವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ, ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸು ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಫೆಬ್ರವರಿ 24ನೆ ತಾರೀಖಿನಿಂದ 1907ನೆ ಮಾರ್ಚಿ 4ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಫೆಬ್ರವರಿ 1907.

ನಂ. 7209—ಸ್ಯಾ. 150-06-4, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

	ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು ಇಂದ	ತಾರೀಖು ಗೆ
1.	ಶ್ರೀ ನರಸಿಂಹಸ್ವಾಮಿಯವರ ಜಾತ್ರೆ.	ಸುಗ್ಗನಹಳ್ಳಿ	ಮಾಗಡಿ	28—2—07	6—3—07
2.	ಶ್ರೀ ರಂಗನಾಥಸ್ವಾಮಿಯವರ ಜಾತ್ರೆ.	ತಿರುಮಲೆ	ಡಿಟೋ	29—3—07	6—4—07

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸು ಎಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಫೆಬ್ರವರಿ 1907.

ನಂ. 7211—ಸ್ಯಾನಿಟೆರಿ 139-06—10, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್